‘ಘಟಶ್ರಾದ್ಧ’ ಚಿತ್ರೀಕರಣದಲ್ಲಿ, ಒಂದು ಕಾರಣದಿಂದ ನಾಲ್ಕೇ ದಿನದೊಳಗೆ ಒಬ್ಬ ನಟರ ಚಿತ್ರೀಕರಣ ಮುಗಿಸಬೇಕಾಗಿ ಬಂತು. ಆದರೆ ಶೂಟ್ ಮಾಡಬೇಕಾದ ದೃಶ್ಯಗಳು ಅನೇಕವಿದ್ದವು. ಏನು ಮಾಡಲೂ ತೋಚದೇ ನಾನು ಖಿನ್ನನಾಗಿ ಕೂತಿದ್ದೆ. ಆಗ ಅವರು ‘ನಾನ್‌ಸ್ಟಾಪ್ ಶೂಟಿಂಗ್ ಮಾಡೋಣ’ ಎಂದರು. ‘ಚೋಮನ ದುಡಿ’ಯಲ್ಲಿ ಎರಡು ಹಗಲು, ಎರಡು ರಾತ್ರಿ ಬಿಡುವಿಲ್ಲದೇ ಚಿತ್ರೀಕರಣ ಮಾಡಿದ್ದೆವು. ನಿರ್ದೇಶಕ, ಛಾಯಾಗ್ರಾಹಕ ಇಬ್ಬರನ್ನು ಬಿಟ್ಟು ಉಳಿದವರೆಲ್ಲರೂ ಪಾಳಿಯಲ್ಲಿ ನಿದ್ದೆ ಮಾಡಲು ಹೇಳಿ ಚಿತ್ರೀಕರಣಕ್ಕೆ ಇಳಿದರು. ಎರಡು ದಿನವಾಯಿತು, ಮೂರು ದಿನವಾಯಿತು– ದೃಶ್ಯಗಳು ಮುಗಿಯಲೂ ಇಲ್ಲ, ಚಿತ್ರೀಕರಣ ನಿಲ್ಲಲೂ ಇಲ್ಲ. ಇಷ್ಟಾದರೂ ರಾಮಚಂದ್ರರ ಮುಖದಲ್ಲಿ ಮಾತ್ರ ದಣಿವಿನ ಸುಳಿವಿಲ್ಲ! ನಾಲ್ಕನೆಯ ರಾತ್ರಿ ಅವರು ಲೈಟಿಂಗ್ ಮಾಡುತ್ತಿರುವಾಗ ಪಕ್ಕದಲ್ಲೇ ಕುಳಿತಿದ್ದ ನಾನು ಎಚ್ಚರ ತಪ್ಪಿ ಬಿದ್ದಾಗಲೇ ಶೂಟಿಂಗ್ ನಿಂತದ್ದು!

ಲೆಸ್ಲಿ ಕರ್ವಾಲೋ 1995ರಲ್ಲಿ ತೆಗೆದ ಮೊದಲ ಚಿತ್ರ ‘ಔಟ್‌ಹೌಸ್’ಗೆ ರಾಮಚಂದ್ರರೇ ಛಾಯಾಗ್ರಾಹಕರು. ಬೆಂಗಳೂರಿನ ಆಂಗ್ಲೋ ಇಂಡಿಯನ್ ಕುಟುಂಬದ ಏಳು ಬೀಳುಗಳನ್ನು ಕುರಿತ ಇಂಗ್ಲಿಷ್ ಭಾಷೆಯ ಚಿತ್ರ. ಅವರು ಹೇಳಿದ ಒಂದು ಘಟನೆ ರಾಮಚಂದ್ರರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಹಿರಿಯ ಛಾಯಾಗ್ರಾಹಕರೂ, ಖ್ಯಾತರೂ ಆಗಿದ್ದ ರಾಮಚಂದ್ರ ಭರ್ಜರಿ ಸಂಭಾವನೆ ಕೇಳಿಯಾರೆಂಬ ಅಳುಕಿನಿಂದಲೇ ಲೆಸ್ಲಿ ‘ಸಂಭಾವನೆ ಎಷ್ಟು ಕೊಡಬೇಕು?’ ಎಂದು ಕೇಳಿದರಂತೆ. ಅದಕ್ಕೆ ತಮ್ಮ ಸಹಜ ಸುಂದರ ನಗೆ ನಕ್ಕ ರಾಮಚಂದ್ರ– ‘ಈ ಚಿತ್ರದಲ್ಲಿ ನನಗೆ ಸಂಭಾವನೆ ಮುಖ್ಯ ಆಗೋದಿಲ್ಲಾರೀ. ಇಷ್ಟು ವರ್ಷದ ನನ್ನ ಜೀವನದಲ್ಲಿ ಆಂಗ್ಲೋ ಇಂಡಿಯನ್ ಕಮ್ಯುನಿಟಿಯನ್ನು ಹತ್ತಿರದಿಂದ ನೋಡುವ, ಅರ್ಥ ಮಾಡಿಕೊಳ್ಳುವ ಅವಕಾಶವೇ ಸಿಕ್ಕಿರಲಿಲ್ಲ. ಈ ಚಿತ್ರದಲ್ಲಿ ಅದು ಸಾಧ್ಯವಾಗುತ್ತಿದೆ. ಹಾಗಾಗಿ ಇದರಲ್ಲಿರುವುದು ಸ್ವಾರ್ಥ’ ಎಂದರಂತೆ. ಅದು ರಾಮಚಂದ್ರರ ವೈಶಿಷ್ಟ್ಯ.

ಸಿನಿಮಾವೊಂದು ಇಷ್ಟವಾಗದಿದ್ದರೆ ರಾಮಚಂದ್ರ ಬಳಸುತ್ತಿದ್ದ ಶಬ್ದ ‘ಗಟ್ಟಿಯಾಗಿಲ್ಲ’ ಎಂದು. ಕೇವಲ ಭಿನ್ನ ನುಡಿಗಟ್ಟಲ್ಲಿ ಅವರು ತಮ್ಮ ಅಭಿಪ್ರಾಯ ಹೇಳುತ್ತಿದ್ದಾರೆ ಎಂದು ನಾನು ಭಾವಿಸುತ್ತಿರಲಿಲ್ಲ. ಮರವೊಂದು ಆಳಕ್ಕಿಳಿದಷ್ಟೂ ಗಟ್ಟಿಯಾಗುತ್ತಾ ಹೋಗುತ್ತದಲ್ಲ ಹಾಗೆಯೇ ಸಿನಿಮಾ ಕೃತಿ ಸಮುದಾಯದ ಪ್ರಜ್ಞಾವಲಯದ ಆಳಕ್ಕಿಳಿಯಬೇಕು ಎನ್ನುತ್ತಿದ್ದರು ಅವರು.

ರಾಮಚಂದ್ರರಿಗೂ ತೀರ್ಥಹಳ್ಳಿ ಪ್ರಿಯವಾದ ತಾಣ. ಆದರೆ ಬೇರೊಂದು ಕಾರಣಕ್ಕೆ– ಅಲ್ಲಿನ ಬಸ್ ಸ್ಟ್ಯಾಂಡ್‌ನಿಂದಾಗಿ. ಬೆಳಿಗ್ಗೆ 5ಕ್ಕೇ ಎದ್ದು ಬಸ್‌ಸ್ಟ್ಯಾಂಡ್‌ಗೆ ಹೋಗಿ ಅಲ್ಲಿನ ಹೋಟೆಲ್‌ನಲ್ಲಿ ಒಂದು ಲೋಟ ಕಾಫಿ ಒಂದು ಬನ್ ತಗೊಂಡು ಅಲ್ಲಿನ ಕಟ್ಟೆಯ ಮೇಲೆ ಕೂತರೆಂದರೆ ಏಳು ಗಂಟೆಯವರೆಗೂ ಏಳುತ್ತಿರಲಿಲ್ಲ. ಅವರಲ್ಲಿದ್ದ ಆಕರ್ಷಣೆ ರಾತ್ರಿ ಬಸ್‌ನಲ್ಲಿ ಬಂದಿಳಿಯುತ್ತಿದ್ದ ಜನರು.


‘ಕ್ರೌರ್ಯ’ ಶೂಟಿಂಗ್‌ನಲ್ಲಿ ನೀರಿನಲ್ಲಿ..


‘ಘಟಶ್ರಾದ್ಧ’ದ ವೇಳೆ ಸದಾನಂದ ಸುವರ್ಣ, ರಾಮಚಂದ್ರ, ಯು.ಆರ್. ಅನಂತಮೂರ್ತಿ ಮತ್ತು ಕಾಸರವಳ್ಳಿ

ಬೆಂಗಳೂರಿನಿಂದ, ಹುಬ್ಬಳ್ಳಿಯಿಂದ, ಮಂಗಳೂರಿನಿಂದ, ಕಾರವಾರದಿಂದ ಬರುವ ಎಷ್ಟೊಂದು ಜನರು! ಮುದುಕರು, ಹುಡುಗರು, ಅಳುತ್ತಿರುವ ಮಕ್ಕಳು, ಸಂತೈಸುತ್ತಿರುವ ತಾಯಂದಿರು, ಸಂತೋಷದಿಂದ ಊರಿಗೆ ವಾಪಾಸ್ಸಾಗುತ್ತಿರುವವರು, ಕೆಲಸ ಕಳೆದು ಕೊಂಡ ಸಪ್ಪೆ ಮುಖದವರು– ತರತರಹದ ಉಡುಗೆ ತೊಡುಗೆ ತೊಟ್ಟವರು, ಎಷ್ಟು ಬಗೆಯ ಭಾವನೆಗಳು, ಎಷ್ಟೊಂದು ಕನ್ನಡಗಳು. ವಿವರ ವೈವಿಧ್ಯತೆಗಾಗಿ ತವಕಿಸುತ್ತಿದ್ದ ಅವರ ಕಣ್ಣ ಒಳಗಿನ ಕ್ಯಾಮರಾಕ್ಕೆ ಹಬ್ಬವೋ ಹಬ್ಬ! ಅಲ್ಲಿ ಕಂಡದ್ದೆಲ್ಲಾ ಅವರ ಚಿತ್ರ ಬಿಂಬಗಳ ಜೀವದ್ರವ್ಯವಾಗಿ ಮೂಡಿ ಬರುತ್ತಿತ್ತು. ಅವರ ಈ ಗುಣದಿಂದ ನಾನು ಕಲಿತಿದ್ದು ಬಹಳ.

## ನಮ್ಮ ಒಡನಾಟ

ನನ್ನ ರಾಮಚಂದ್ರರ ಗೆಳೆತನ 35 ವರ್ಷಗಳಷ್ಟು ದೀರ್ಘವಾದದ್ದು. ಅವರ ಸಲಹೆ ಸಹಕಾರ ಇಲ್ಲದಿದ್ದರೆ ಮಿತ ಬಂಡವಾಳದಲ್ಲಿ ‘ಘಟಶ್ರಾದ್ಧ’ ಮುಗಿಸಲಾಗುತ್ತಿರಲಿಲ್ಲ.

‘ಮನೆ’ ಚಿತ್ರದಲ್ಲಿ ನಟರೊಬ್ಬರ ಅಸಹಕಾರದಿಂದ ಬೇಸತ್ತು ಚಿತ್ರದಿಂದಲೇ ಹೊರನಡೆಯಲು ಯೋಚಿಸುತ್ತಿದ್ದಾಗ ತಡೆದವರು ಅವರು. ‘ಗುಲಾಬಿ ಟಾಕೀಸು’ ಮಾಡುವಾಗ ವೈಶಾಲಿ ಆರೋಗ್ಯ ಕೆಟ್ಟು ಆಸ್ಪತ್ರೆ ಸೇರಬೇಕಾಗಿ ಬಂದಾಗ ಎರಡು ದಿನ ಚಿತ್ರೀಕರಣದ ಸಾರಥ್ಯ ವಹಿಸಿದ್ದು ಅವರೇ.

ಚಿತ್ರಸಮೂಹದ ಕಾರ್ಯಕ್ರಮಗಳಿಗೆ ಹೊಸ ಹುರುಪು ತುಂಬುತ್ತಿದ್ದವರು ಅವರು. ನನ್ನಂತೆಯೇ ಎಲ್ಲಾ ಚಿತ್ರಗಳಲ್ಲೂ ನಿರ್ದೇಶಕರನ್ನು ಬೆಂಬಲಿಸುತ್ತಿದ್ದವರು ಅವರು. ನಮ್ಮ ಒಡನಾಟಗಳಲ್ಲಿ, ಜಗಳಗಳಲ್ಲಿ, ಚರ್ಚೆಗಳಲ್ಲಿ, ಭಿನ್ನಾಭಿಪ್ರಾಯಗಳಲ್ಲಿ ಸಾಕಷ್ಟು ಸ್ವಾರಸ್ಯಕರ ಘಟನೆಗಳು ಜರುಗಿವೆ. ಮೊಗೆದಷ್ಟೂ ಸಿಗುವ ಆ ನೆನಪುಗಳು ಬರೆದು ಮುಗಿಸಲಾಗದಷ್ಟಿವೆ.

■